ಕುಣಿಗಲ್ ವಿಧಾನ ಸಭಾ ಕ್ಷೇತ್ರದಲ್ಲಿ ಅಗತ್ಯವಾದ ಮೂಲಭೂತ ಸೌಕರ್ಯಗಳಿರುವುದು ಗಮನದಲ್ಲಿದ್ದು, ಈ ಕೆಳಕಂಡಂತೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ.

- ಕುಣಿಗಲ್‌ನಲ್ಲಿ ಕೆಐಎಡಿಬಿಯವರು ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಮೊದಲನೇ ಹಂತದಲ್ಲಿ 112.57 ಎಕರೆ ಜಮೀನನ್ನು 1984ರಲ್ಲಿ ಸ್ವಾಧೀನ ಪಡಿಸಿಕೊಂಡು ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿ ಪಡಿಸಿರುತ್ತಾರೆ.
- ಕೆಐಎಡಿಬಿಯವರು 2ನೇ ಹಂತದ ಕೈಗಾರಿಕಾ ಪ್ರದೇಶಕ್ಕೆ 57.91 ಎಕರೆ ಜಮೀನನ್ನು 2006–07ರಲ್ಲಿ ವಶಪಡಿಸಿ ಕೊಂಡು ಅಭಿವೃದ್ಧಿ ಪಡಿಸಿರುತ್ತಾರೆ.
- ಕುಣಿಗಲ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 18 ಯೋಜನೆಗಳಿಗೆ ಒಟ್ಟು ರೂ.205.77 ಕೋಟಿ ಬಂಡವಾಳ ಹೂಡಿ ಸ್ಥಾಪಿಸಲು ರಾಜ್ಯಮಟ್ಟದ ಏಕ ಗವಾಕ್ಷಿ ಸಮಿತಿ ಸಭೆಯು ಅನುಮೋದನೆ ನೀಡಿದ್ದು, ಇವುಗಳಲ್ಲಿ 12 ಯೋಜನೆಗಳು ರೂ.188.84 ಕೋಟಿ ಬಂಡವಾಳ ಹೂಡಿ ಅನುಷ್ಠಾನಗೊಂಡಿದ್ದು, ಇವುಗಳಿಂದ 1845 ಜನರಿಗೆ ಉದ್ಯೋಗ ದೊರಕಿದೆ. ಉಳಿದ 6 ಯೋಜನೆಗಳು ಅನುಷ್ಠಾನ ಹಂತದಲ್ಲಿರುತ್ತದೆ.
- ದಿನಾಂಕ 17.3.2008ರಂದು ಮೆ: ವೇನರ್ ಬರ್ಗರ್ ಬ್ರಿಕ್ ಇಂಡಸ್ಟ್ರಿ ಪ್ರೈ. ಲಿಮಿಟೆಡ್ ಇವರಿಗೆ ರೂ.88.87 ಕೋಟಿ ಬಂಡವಾಳ ಹೂಡಿ ಬಿಲ್ಡಿಂಗ್ ಬ್ರಿಕ್ಸ್ ಘಟಕವನ್ನು 2ನೇ ಹಂತದ ಕೈಗಾರಿಕಾ ಪ್ರದೇಶ ಕುಣಿಗಲ್‌ನಲ್ಲಿ ಸ್ಥಾಪಿಸಲು ರಾಜ್ಯ ಉನ್ನತ ಮಟ್ಟದ ಸಭೆಯಿಂದ ಅನುಮೋದನೆ ದೊರಕಿದ್ದು, ಸದರಿ ಯೋಜನೆಯು ಅನುಷ್ಠಾನದ ಹಂತದಲ್ಲಿರುತ್ತದೆ. ಈ ಯೋಜನೆಯಿಂದ 181 ಜನರಿಗೆ ಉದ್ಯೋಗ ಸಿಗುವ ನಿರೀಕ್ಷೆ ಇದೆ.

ಇ. ಹಾಗಿದ್ದಲ್ಲಿ, ಸರ್ಕಾರ ಈ ದಿಸೆಯಲ್ಲಿ ಕೂಡಲೇ ಕ್ರಮ ಕೈಗೊಳ್ಳುವುದೇ?

ಕೆಐಎಡಿಬಿಯವರು ಇನ್ನೂ ಹೆಚ್ಚಿನ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ 3ನೇ ಹಂತದ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತಾರೆ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ	: (295)174
2) ಸದಸ್ಯರ ಹೆಸರು	: ಶ್ರೀ.ರಾಮಸ್ವಾಮಿಗೌಡ, ಬಿ.ಬಿ.(ಕುಣಿಗಲ್)
3) ಉತ್ತರಿಸುವ ಸಚಿವರು	: (ಶ್ರೀ.ಗೋವಿಂದ ಎಂ.ಕಾರಜೋಳ್) ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಂಖ್ಯಿಕ ಸಚಿವರು

ಅ) ಕುಣಿಗಲ್ ತಾಲ್ಲೂಕು ಹುತ್ತಿದುರ್ಗ ಹೋಬಳಿಯ ಮುದ್ದು ರಂಗನಕೆರೆ ಮತ್ತು ಹುಲಿಯೂರು ದುರ್ಗ ಹೋಬಳಿಯ ಮುದ್ದಲಿಂಗನದೊಡ್ಡಿ ಕೆರೆಗಳ ಪುನರ್ ನಿರ್ಮಾಣ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಬಂದಿದೆ.

ಆ) ಹಾಗಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು ?

1) ಕುಣಿಗಲ್ ತಾಲ್ಲೂಕು ಹುತ್ತರಿ ದುರ್ಗ ಹೋಬಳಿಯ ಮುದ್ದುರಂಗನಕೆರೆ ಪುನರ್ ನಿರ್ಮಾಣಕ್ಕಾಗಿ 2007–08ರ ಸಾಲಿನಲ್ಲಿ ರೂ.100.00ಲಕ್ಷಗಳ ಅಂದಾಜು ಮೊತ್ತ ಮತ್ತು ರೂ.40.00 ಲಕ್ಷಗಳ ಅನುದಾನ ಒದಗಿಸುಲಾಗಿತ್ತು. ಈ ಕೆರೆ ಪುನರ್ ನಿರ್ಮಾಣಕ್ಕಾಗಿ 2007–08ನೇ ಸಾಲಿನ ದರಪಟ್ಟಿಯ ದರಗಳನ್ವಯ ರೂ.260.00 ಲಕ್ಷಗಳ ಅಂದಾಜು ಮೊತ್ತಕ್ಕೆ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯ ಅನುಮೋದನೆಯನ್ನು ಪಡೆಯಲಾಗಿದೆ. ಸದರಿ ಪ್ರಸ್ತಾವನೆಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡುವ ಸಲುವಾಗಿ ನೀರಿನ ಲಭ್ಯತೆ ಬಗ್ಗೆ ಜಲಸಂಪನ್ಮೂಲ ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿದೆ.

2)ಕುಣಿಗಲ್ ತಾಲ್ಲೂಕು ಹುಲಿಯೂರು ದುರ್ಗ ಹೋಬಳಿಯ ಮುದ್ದಲಿಂಗನದೊಡ್ಡಿ ಕೆರೆ ಪುನರ್ ನಿರ್ಮಾಣಕ್ಕಾಗಿ 2007–08ರ ಸಾಲಿನ ಆಯವ್ಯಯದಲ್ಲಿ ರೂ.98.00 ಲಕ್ಷಗಳ ಅಂದಾಜು ಮೊತ್ತಕ್ಕೆ ಹಾಗೂ ರೂ.40.00ಲಕ್ಷಗಳ ಅನುದಾನ ಒದಗಿಸಲಾಗಿತ್ತು. ಸದರಿ ಕೆರೆ ಪುನರ್ ನಿರ್ಮಾಣ ಕ್ಕಾಗಿ 2007–08ನೇ ಸಾಲಿನ ದರಪಟ್ಟಿಯ ದರಗಳನ್ವಯ ರೂ.130.00 ಲಕ್ಷಗಳ ಅಂದಾಜಿಗೆ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯಿಂದ ತೀರುವಳಿ ಪಡೆಯಲಾಗಿದೆ. ಆಡಳಿತಾತ್ಮಕ ಅನುಮೋದನೆಗಾಗಿ ನೀರಿನ ಲಭ್ಯತೆ ಬಗ್ಗೆ ಜಲಸಂಪನ್ಮೂಲ ಇಲಾಖೆಯ ಅಭಿಪ್ರಾಯವನ್ನು ನಿರೀಕ್ಷಿಸಲಾಗುತ್ತಿದೆ.

ಇ) ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಲಾಗುವುದೆ ?

ನೀರಿನ ಲಭ್ಯತೆ ಬಗ್ಗೆ ಜಲಸಂಪನ್ಮೂಲ ಇಲಾಖೆಯಿಂದ ಅಭಿಪ್ರಾಯ ಪಡೆದುಕೊಂಡು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಪರಿಶೀಲಿಸಲಾಗುವುದು.